ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ, ಬೆಳಗಾವಿ

ಜಂಟಿ ನಿರ್ದೇಶಕರ ಕಾರ್ಯಾಲಯ ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ

OFFICE OF THE JOINT DIRECTOR SOCIAL WELFARE DEPARTMENT, BELAGAVI

ಸಂ:ಜಂನಿಸಕಇ:ಸಿಬ್ಬಂದಿ:ವಿವ–33:2017–18 ದಿನಾಂಕ:17/08/2017

:–ಸೂಚನಾ ಪತ್ರ:–

ವಿಷಯ: ಸಮಾಜ ಕಲ್ಯಾಣ ಇಲಾಖೆಯ ಕಾವಲುಗಾರ ಹುದ್ದೆಯ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಹಾಜರಾಗುವ ಕುರಿತು.

ಉಲ್ಲೇಖ (1) ಜಿಲ್ಲಾಧಿಕಾರಿಗಳು, ಬೆಳಗಾವಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾಜ ಕಲ್ಯಾಣ ಇಲಾಖೆ, ಗ್ರೂಪ್ ಡಿ ನೇಮಕಾತಿ/ಆಯ್ಕೆ ಸಮಿತಿ ಸಭೆಯ ನಡವಳಿ ದಿನಾಂಕ:16/8/2017

(2) ಸರ್ಕಾರದ ಆದೇಶ ಸಂಖ್ಯೆ ಸಕಇ 278 ಪಕಸೇ 2017 ಬೆಂಗಳೂರು ದಿನಾಂಕ:04/08/2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:16/8/2017 ರಂದು ಜರುಗಿದ ಸಮಾಜ ಕಲ್ಯಾಣ ಇಲಾಖೆಯ ಗ್ರೂಪ್ ಡಿ ವೃಂದದ ಕಾವಲುಗಾರ ಹುದ್ದೆಯ ಅಂತಿಮ ನೇಮಕಾತಿ ಪಟ್ಟಿಯಲ್ಲಿ ತಮ್ಮನ್ನು ಆಯ್ಕೆ ಮಾಡಲಾಗಿದೆ. ಉಲ್ಲೇಖಿತ (2) ರ ಸರ್ಕಾರದ ಆದೇಶದ ಪ್ರಕಾರ ಅಂತಿಮ ಆಯ್ಕೆ ಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡುವಂತೆ ನಿರ್ದೇಶನ ನೀಡಿದ ಮೇರೆಗೆ ದಿನಾಂಕ:21/08/2017 ರಂದು ಮಧ್ಯಾಹ್ನ 3.00 ರಿಂದ 5.30 ಗಂಟೆ ವರೆಗೆ ಜಂಟಿ ನಿರ್ದೇಶಕರ ಕಛೇರಿ ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ಸಭಾಂಗಣದಲ್ಲಿ ತಮ್ಮ ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಲಾಗುತ್ತಿದೆ. ಕಾರಣ ಈ ಕೆಳಕಂಡ ಮೂಲ ದಾಖಲಾತಿಗಳು ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಕಡ್ಡಾಯವಾಗಿ ಹಾಜರಾಗಲು ತಿಳಿಸಿದೆ.

(1) ದಾಖಲಾತಿ ಪರಿಶೀಲನೆ ಹಾಜರಾತಿ ಸೂಚನಾ ಪತ್ರ

(2) ಆನ್‌ಲೈನ್ ಮೂಲ ಸಲ್ಲಿಸಲಾದ ಅರ್ಜಿಯ ಪ್ರತಿ

(3) ಅರ್ಜಿ ಶುಲ್ಕ ಪಾವತಿಸಿದ ಅಂಚೆ ಚಲನ್ ಪ್ರತಿ

(4) ಎಸ್.ಎಸ್.ಎಲ್.ಸಿ ವಿದ್ಯಾರ್ಹತೆ ಅಂಕಪಟ್ಟಿ

(5) ಜನ್ಮ ದಿನಾಂಕವನ್ನು ನಮೂದಿಸಿರುವ ಎಸ್.ಎಸ್.ಎಲ್.ಸಿ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) ಜನ್ಮ ದಿನಾಂಕವನ್ನು ತೋರಿಸುವಂತಹ ಉದ್ಧೃತಭಾಗ

(6) ಮೀಸಲಾತಿ ಸೌಲಭ್ಯ ಕೋರಿದ್ದಲ್ಲಿ, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳು ನಮೂನೆ 'ಡಿ' ರಲ್ಲಿ ಪ್ರವರ್ಗ–1 ರ ಅಭ್ಯರ್ಥಿಗಳು ನಮೂನೆ–'ಇ' ರಲ್ಲಿ ಪ್ರವರ್ಗ2ಎ,2ಬಿ,3ಎ ಮತ್ತು 3ಬಿ ರ ಅಭ್ಯರ್ಥಿಗಳು ನಮೂನೆ–'ಎಫ್' ರಲ್ಲಿ ತಹಶೀಲ್ದಾರ್‌ರಿಂದ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ

(7) ಗ್ರಾಮೀಣ ಮೀಸಲಾತಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಪ್ರವರ್ಗ–1,2ಎ,2ಬಿ,3ಎ,3ಬಿ ಅಭ್ಯರ್ಥಿಗಳು ನಮೂನೆ–2 ರಲ್ಲಿ (ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ರುಜು ಪಡೆದಿರಬೇಕು) ಹಾಗೂ ಸಾಮಾನ್ಯ ವರ್ಗದ ಗ್ರಾಮೀಣ ಮೀಸಲಾತಿ ಕೋರುವ ಅಭ್ಯರ್ಥಿಗಳು ನಮೂನೆ–2 ರ ಪ್ರಮಾಣ ಪತ್ರದ ಜೊತೆಗೆ ನಮೂನೆ–1 ರಲ್ಲಿ ತಹಶೀಲ್ದಾರ್ ರಿಂದ ಮೇಲುಸ್ತರಕ್ಕೆ ಸೇರಿಲ್ಲದಿರುವ ಬಗ್ಗೆ ಪಡೆದ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(8) ಸೈನಿಕ ಸೇವೆಯಿಂದ ಬಿಡುಗಡೆಯಾದ / ಮುಕ್ತಿ ಹೊಂದಿದ ಬಗೆಗಿನ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(9) ಸೇವೆಯಲ್ಲಿರುವ ಅಭ್ಯರ್ಥಿಗಳು ಸಂಬಂಧಿತ ನೇಮಕಾತಿ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(10) ಹೈದ್ರಾಬಾದ್–ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿ ಕೋರಿರುವ ಅಭ್ಯರ್ಥಿಗಳು ಸರ್ಕಾರದ ಅಧಿಸೂಚನೆ ಸಂಖ್ಯೆ 1 & 11 ಆದೇಶ ಸಂಖ್ಯೆ DPAR 43HKC/2013 ದಿನಾಂಕ:29/1/2017 ರಂತೆ ಸಕ್ಷಮ ಪ್ರಾಧಿಕಾರ ನೀಡಿದ ಅರ್ಹತಾ ಪ್ರಮಾಣ ಪತ್ರ ಅನುಬಂಧ–3 (ಅನುಚ್ಛೇಧ–371) (ಜೆ) ಮೇರೆಗೆ (3) (3) ನೇ ನಿಯಮದಂತೆ (ಅನ್ವಯಿಸುವವರಿಗೆ ಮಾತ್ರ)

(11) ಶಾಲೆಯ ಮುಖ್ಯೋಪಾಧ್ಯಾಯರಿಂದ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ರುಜು ಪಡೆದಿರುವ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಪ್ರಮಾಣ ಪತ್ರ (1ನೇ ತರಗತಿಯಿಂದ 10ನೇ ತರಗತಿಯವರೆಗೆ (ಅನ್ವಯಿಸುವವರಿಗೆ ಮಾತ್ರ)

(12) ಸಕ್ಷಮ ಪ್ರಾಧಿಕಾರದಿಂದ ಪಡೆದ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(13) ಶೇ.40 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳು ವೈದ್ಯಕೀಯ ಮಂಡಳಿಯಿಂದ ನಿಗಧಿತ ನಮೂನೆಯಲ್ಲಿ ಪಡೆದ ಅಂಗವಿಕಲ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(14) ಅಂಗವಿಕಲರ ಮೀಸಲಾತಿ ಪಡೆಯಲಿಚ್ಚಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಹಾಜರಪಡಿಸುವದು.

1ನೇ ಮಹಡಿ, ಹಳೆ ಪಿ.ಬಿ.ರಸ್ತೆ, ರಾಮದೇವ ಹೋಟೇಲ್ ಹತ್ತಿರ, ನೆಹರುನಗರ ಬೆಳಗಾವಿ–590010. 1st Floor, Old P.B.Road, Near Ramdev Hotel, Nehru Nagar Belagavi – 590010

ದೂರವಾಣಿ ಕಚೇರಿ 0831-2407245 ಫ್ಯಾಕ್ಸ್ 0831-2470388 ಮಿಂಚಂಚೆ ವಿಳಾಸ / Email ID dsw.bgm@gmail.com

E:\EST 2016-17\vvvv\New folder\Call Letter 21.8.2017.docx

(15) ಯೋಜನಾ ನಿರಾಶ್ರಿತರ ಅಭ್ಯರ್ಥಿಗಳು, ವಿಧವೆಯರು, ಜೀತ ಕಾರ್ಮಿಕರು ಇವರುಗಳು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ (ಅನ್ವಯಿಸುವವರಿಗೆ ಮಾತ್ರ)

(16) ಅಭ್ಯರ್ಥಿಗಯು Voter ID/Passport/DL/Pan card/Bank passbook/Aadhar card etc, ಇವುಗಳಲ್ಲಿ ಯಾವುದಾದರೂ ಒಂದು ಗುರುತಿನ ಚೀಟಿ ತರುವದು.

ಅಭ್ಯರ್ಥಿಗಳಿಗೆ ಸೂಚನೆಗಳು

1) ಮೇಲಿನಂತೆ ದಿನಾಂಕ:21/08/2017 ಮಧ್ಯಾಹ್ನ 3.30 ಗಂಟೆಗೆ ಈ ಕಚೇರಿ ಸಭಾಂಗಣದಲ್ಲಿ ನಡೆಯುವ ದಾಖಲಾತಿ ಪರಿಶೀಲನೆ ಮೇಲಿನ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ನಿಗಧಿತ ಸಮಯಕ್ಕೆ ಹಾಜರಾಗುವದು ನಿಗಧಿತ ಸಮಯದ ನಂತರ ಹಾಜರಾಗುವವರನ್ನು ದಾಖಲಾತಿ ಪರಿಶೀಲನೆಗೆ ಪರಿಗಣಿಸಲಾಗುವದಿಲ್ಲ.

2) ದಾಖಲಾತಿ ಪರಿಶೀಲನೆಗೆ ಗೈರ ಹಾಜರಾದಲ್ಲಿ ಅಂತಹ ಅಭ್ಯರ್ಥಿಗಳ ಹೆಸರನ್ನು ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವದು. .

3) ಅಭ್ಯರ್ಥಿಯು ಮೇಲಿನಂತೆ ಕಾಣಿಸಿದ ಎಲ್ಲಾ ಮೂಲ ದಾಖಲಾತಿಗಳನ್ನು ಪರಿಶೀಲನೆ ನೀಡಬೇಕು, ಇವುಗಳಲ್ಲಿ ಯಾವುದೇ ದಾಖಲಾತಿಗಳನ್ನು ಪರಿಶೀಲನೆಗೆ ಒಪ್ಪಿಸಲು ವಿಫಲವಾಗುವ ಅಭ್ಯರ್ಥಿಯ ಹೆಸರನ್ನು ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವದು. ಇದು ದಾಖಲಾತಿ ಪರಿಶೀಲನಾ ಹಾಜರಾತಿ ಪತ್ರವಾಗಿದ್ದು, ಇದರ ಆಧಾರದ ಮೇಲೆ ಅಭ್ಯರ್ಥಿಯು ಹುದ್ದೆಯನ್ನು ಕೋರುವ ಹಕ್ಕು ಹೊಂದಿರುವುದಿಲ್ಲ.

4) ದಾಖಲಾತಿ ಪರಿಶೀಲನೆ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಹಾಜರಾಗುವದು. ಇದಕ್ಕಾಗಿ ಪ್ರಯಾಣ ಭತ್ಯೆ/ದಿನ ಭತ್ಯೆ ನೀಡಲು ಅವಕಾಶವಿರುವುದಿಲ್ಲ.

ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ

ಗೆ,